ಆಯ್ದ 25 ರೈತರಿಗೆ (ಕೆವಿಕೆ ಲಿಂಕ್ಡ್ ಪ್ರಾಜೆಕ್ಟ್ ಅಡಿಯಲ್ಲಿ) ಕೀಟನಾಶಕ ಮತ್ತು ಮೋಹಕ ಬಲೆಗಳ ವಿತರಣೆ, ಬೀಜೋಪಚಾರ ಮತ್ತು ಮೋಹಕ ಬಲೆಯ ಬಳಕೆಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಯಿತು. ತೊಗರಿ ತಾಕುಗಳಿಗೆ ಕ್ಷೇತ್ರ ಭೇಟಿ ಮಾಡಲಾಯಿತು. ತೊಗರಿ ಬೆಳೆಯ ಕ್ಷೇತ್ರ ದಿನವನ್ನು (ಸಮಗ್ರ ಪೀಡೆ ನಿರ್ವಹಣೆ) ಶಿಡ್ಲಯ್ಯನಕೋಟೆಯಲ್ಲಿ 2018ರ ಜನವರಿ 12 ರಂದು ನಡೆಸಲಾಯಿತು.

ತೊಗರಿ ಬೆಳೆಯಲ್ಲಿ (ಸಮಗ್ರ ಪೀಡೆ ನಿರ್ವಹಣೆ) ಮುಂಚೂಣಿ ಪ್ರಾತ್ಯಕ್ಷಿಕೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ರೈತರು ಬೀಜೋಪಚಾರ ಮಾಡುವುದು, ಬರಗಾಲದ ನಡುವೆಯೂ ಉತ್ತಮ ಬೆಳೆ ಪಡೆಯುವಲ್ಲಿ ಯಾವ ತಂತ್ರಜ್ಞಾನ ಅನುಸರಿಸಬೇಕೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಡಾ.ಎಸ್. ಓಂಕಾರಪ್ಪ ಹಿರಿಯ ವಿಜ್ಞಾನಿ ಮತ್ತು ಮುಖ್ಯರಸ್ಥರು, ಕೃಷಿ ವಿಜ್ಞಾನ ಕೇಂದ್ರ, ಚಿತ್ರದುರ್ಗ, ಕೃಷಿ ಅಧಿಕಾರಿ ಡಾ. ಮಸ್ತಾಕ್ ಮತ್ತು ರೈತರು ಉಪಸ್ಥಿತರಿದ್ದರು.





**ಚಿತ್ರ: 11**

**ತೊಗರಿಬೆಳೆಯಲ್ಲಿ ಸಮಗ್ರ ಪೀಡೆ ನಿರ್ವಹಣೆ ತರಬೇತಿ** **ರೈತರಿಗೆ ಪರಿಕರಗಳ ವಿತರಣೆ**

**8.1 ತೊಗರಿ ಬೆಳೆಯಲ್ಲಿ (ಸಮಗ್ರ ಪೀಡೆ ನಿರ್ವಹಣೆ) ಮುಂಚೂಣಿ ಪ್ರಾತ್ಯಕ್ಷಿಕೆ : (2018)**

ಐದು ರೈತರಿಗೆ ತೊಗರಿ ಬಿ.ಆರ್.ಜಿ–5 ತಳಿ ಬೀಜಗಳನ್ನು ವಿತರಿಸಲಾಗಿದ್ದು, 2018 ರ ಜುಲೈ ತಿಂಗಳಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ ಜಾರಿಗೆ ತರಲಾಯಿತು. ರೈತರಿಗೆ ಅಂತರ ಬೇಸಾಯ ಮತ್ತು ಕೀಟ ನಾಶಕಗಳ ಸುರಕ್ಷಿತ ಬಳಕೆ ಬಗ್ಗೆ ತರಬೇತಿ ನೀಡಲಾಯಿತು.

## 1. ತೊಗರಿ ಬೆಳೆಯಲ್ಲಿ ಮುಂಚೂಣಿ ಪತ್ರಾತ್ಯಕ್ಷಿಕೆ (FLD):

**ತಂತ್ರಜ್ಞಾನ: ತೊಗರಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ**

**ಮುಂಚೂಣಿ ಪತ್ರಾತ್ಯಕ್ಷಿಕೆ ರೈತರ ಪಟ್ಟಿ (2018–2019)**

| ಕ್ರ. ಸಂ. | ಹೆಸರು | ಜಾತಿ | ಬೆಳೆ | ವಿಸ್ತೀರ್ಣ (ಎಕರೆಗಳಲ್ಲಿ) | ತಂತ್ರಜ್ಞಾನ |
|---|---|---|---|---|---|
| 1 | ಶ್ರೀ ರಾಘವೇಂದ್ರ ಎಸ್.ಅರ್. | ಸಾಮಾನ್ಯ | ತೊಗರಿ | 2 | ಸಮಗ್ರ ಬೆಳೆ ನಿರ್ವಹಣೆ |
| 2 | ಶ್ರೀ ಪರಮೇಶ್ವರಪ್ಪ | ಪ.ಜಾ. | ತೊಗರಿ | 1 | ಸಮಗ್ರ ಬೆಳೆ ನಿರ್ವಹಣೆ |
| 3 | ಶ್ರೀ ವೀರೇಶ್ ಕೆ.ಹೆಚ್. | ಸಾಮಾನ್ಯ | ತೊಗರಿ | 1 | ಸಮಗ್ರ ಬೆಳೆ ನಿರ್ವಹಣೆ |
| 4 | ಶ್ರೀ ಚಿದಾನಂದ್ | ಸಾಮಾನ್ಯ | ತೊಗರಿ | 2 | ಸಮಗ್ರ ಬೆಳೆ ನಿರ್ವಹಣೆ |
| 5 | ಶ್ರೀ ಬಸವರಾಜ್ | ಪ.ಜಾ. | ತೊಗರಿ | 2 | ಸಮಗ್ರ ಬೆಳೆ ನಿರ್ವಹಣೆ |

**ತೊಗರಿ ಬೆಳೆಯಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು:**

- ❖ ಹೆಚ್ಚಿನ ಇಳುವರಿ ಕೊಡುವ ತಳಿಗಳ ಕೊರತೆ
- ❖ ಉತ್ಪಾದನಾ ತಾಂತ್ರಿಕತೆ ಕೊರತೆ
- ❖ ಬರಡು ಮತ್ತು ಬಂಜೆ ರೋಗವನ್ನು ತಡೆದುಕೊಳ್ಳುವ ಶಕ್ತಿ ಇಲ್ಲದಿರುವ ತಳಿಗಳು

**ಹೆಚ್ಚಿನ ಇಳುವರಿ ಪಡೆಯಲು ಸುಧಾರಿತ ಬೇಸಾಯ ಕ್ರಮಗಳು**

ಸಮ ಪ್ರಮಾಣದ ಗೊಬ್ಬರ ಬಳಕೆ : ಪ್ರತಿ ಎಕರೆಗೆ

- ❖ ಕೊಟ್ಟಿಗೆ ಗೊಬ್ಬರ : 2 ಟನ್ (25:50:25) ಸಾ:ರ:ಪೊ)
- ❖ ಯುರಿಯಾ 78 ಕಿ.ಗ್ರಾಂ.
- ❖ ಎಸ್.ಎಸ್.ಪಿ. 125 ಕಿ.ಗ್ರಾಂ. ಎಮ್.ಒ.ಪಿ. : 27 ಕಿ.ಗ್ರಾಂ
- ❖ ಸತುವಿನ ಸಲ್ಫೇಟ್ : 4
- ❖ 4 ಗ್ರಾಂ ರೈಜೋಬಿಯಂ ಮತ್ತು 4 ಗ್ರಾಂ ರಂಜಕ ಕರಗಿಸುವ ಅಣುಜೀವಿ ಜೀವಾಣುವನ್ನು ಬಿಜಕ್ಕೆ ಉಪಚರಿಸಿ 20 ನಿಮಿಷದಲಿ ನೆರಳಲ್ಲಿ ಒಣಗಿಸಿ.
- ❖ ಬರಗಾಲದ ಕಾರಣದಿಂದಾಗಿ ಬೆಳೆ ವಿಫಲವಾಗಿದೆ.

## 8.2. ಶೇಂಗಾ ಬೆಳೆಯ ಸಮಗ್ರ ನಿರ್ವಹಣೆ (2018)

- ಉತ್ಪಾದನಾ ತಾಂತ್ರಿಕತೆ ಕೊರತೆ – ಸಮ ಪ್ರಮಾಣದ ಸಸ್ಯಗಳು, ಬೀಜ (ರೈತರು 30–35 ಕಿ.ಗ್ರಾಂ. ಬೀಜವನ್ನು ಉಪಯೋಗಿಸುತ್ತಾರೆ) ಮತ್ತು ಗೊಬ್ಬರದ ಬಳಕೆ (25 ಕ್ರಿ.ಗ್ರಾಂ ಡಿ.ಎ.ಡಿ) ಮತ್ತು ಬೀಜೋಪಚಾರ ಮಾಡುವುದಿಲ್ಲ.
- ಕೀಟ ಹಾಗೂ ರೋಗಗಳು – ಸಸ್ಯಹೇನು, ಗೋಣೆಹುಳು, ಗೆದ್ದಲು, ಕಂಬಳಿಹುಳು, ತುಕ್ಕು ರೋಗ, ಕಾಂಡ ಸುಳಿ ಕೋಳೆ ರೋಗ.

**ಶೇಂಗಾ ಬೆಳೆಯಲ್ಲಿ ಪರಿಚಯಿಸಿದ ತಾಂತ್ರಿಕತೆಗಳು:**

- **ತಳಿ:** ಜಿ.ಪಿ.ಬಿ.ಡಿ–4 ಪರಿಚಯ ಮತ್ತು ಇದರ ವಿಶೇಷ ಗುಣಗಳು
- **ಬೆಳೆಯ ಅವಧಿ** : 105–110 ದಿನಗಳಲ್ಲಿ ಬೆಳೆ ಕೊಯಿಲಿಗೆ ಬರುತ್ತದೆ.
- **ಬಿತ್ತನೆ ಕಾಲ** : ಜೂನ್ – ಜುಲೈ
- **ವೈಶಿಷ್ಟತೆಗಳು** : ಎಲೆ ಚುಕ್ಕೆ ತಡೆದುಕೊಳ್ಳುವ ಶಕ್ತಿ ಇದೆ.
- **ಬೀಜ ಪ್ರಮಾಣ** : 45 ಕಿ. ಗ್ರಾಂ.
- **ಬೀಜೋಪಚಾರ ಮತ್ತು ಬಿತ್ತನೆ:** ಪ್ರತಿ ಕಿ.ಗ್ರಾಂ. ಬಿತ್ತನೆ ಬೀಜವನ್ನು 2 ಗ್ರಾಂ ಕಾರ್ಬೆಂಡಜೆಮ್, 15 ಮಿ.ಲೀ. ಕ್ಲೋರೋಪೈರಿಪಾಸ್, 4 ಗ್ರಾಂ ಟ್ರೈಕೋಡರ್ಮಾ, 4 ಗ್ರಾಂ ರೈಜೋಬಿಯಂ ಮತ್ತು 4 ಗ್ರಾಂ ರಂಜಕ ಕರಗಿಸುವ ಅಣುಜೀವಿ ಜೀವಾಣುವನ್ನು ಬೀಜಕ್ಕೆ ಉಪಚರಿಸಿ 20 ನಿಮಿಷ ನೆರಳಲ್ಲಿ ಒಣಗಿಸಿ. ಟ್ರಾಕ್ಟರ್ ಚಾಲಿತ ಯಂತ್ರದಿಂದ ಬೀಜಗಳನ್ನು 30 ಸೆಂ.ಮೀ. ಅಂತರದ ಸಾಲುಗಳಲ್ಲಿ, ಬೀಜದಿಂದ ಬೀಜಕ್ಕೆ 10 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಲಾಯಿತು.
- **ಸಮ ಪ್ರಮಾಣದ ಗೊಬ್ಬರ ಬಳಕೆ : ಪ್ರತಿ ಎಕರೆಗೆ**
- ಕೊಟ್ಟಿಗೆ ಗೊಬ್ಬರ : 2 ಟನ್ (25:50:25 NPK kg/ha )
- ಯುರಿಯಾ 22 ಕಿ.ಗ್ರಾಂ.
- ಎಸ್.ಎಸ್.ಪಿ.: 125 ಕಿ.ಗ್ರಾಂ. ಎಮ್.ಒ.ಪಿ. : 16 ಕಿ.ಗ್ರಾಮ. ಜಿಪ್ಸಂ: 200 ಕಿ.ಗ್ರಾಂ.
- ಸತುವಿನ ಸಲ್ಫೇಟ್ : 4

## ಸಮಗ್ರ ಕೀಟ ಮತ್ತು ರೋಗದ ನಿರ್ವಹಣೆ

| ಕೀಟಗಳು | ಕಂಬಳಿ ಹುಳ (ಶೇ. ನಷ್ಟ) | ಸಸ್ಯ ಹೇನು (ಶೇ. ನಷ್ಟ) |
|---|---|---|
| ಪ್ರಾತ್ಯಕ್ಷಿಕೆ | 3.2 | 3.5 |
| ರೈತರ ಪದ್ಧತಿ | 5.1 | 6.3 |

| ರೋಗಗಳು | ತುಕ್ಕು (1–9 ಸ್ಕೇಲ್) | ಚುಕ್ಕೆ ರೋಗ (1–9 ಸ್ಕೇಲ್) |
|---|---|---|
| ಪ್ರಾತ್ಯಕ್ಷಿಕೆ | 1.8 | 1.2 |
| ರೈತರ ಪದ್ಧತಿ | 3.2 | 2.9 |

## ಇಳುವರಿ ಮತ್ತು ಆದಾಯಗಳ ವಿವರ

| ವಿವರಗಳು | ಸಸಿಗಳ ಸಂಖ್ಯೆ/ ಚ.ಮೀ. | ಗಿಡದ ಎತ್ತರ (ಸೆಂ.ಮೀ) | ಟೊಂಗೆಗಳು ಪ್ರತಿ ಗಿಡಕ್ಕೆ | ಕಾಯಿಗಳ ಸಂಖ್ಯೆ / ಗಿಡ | 100 ಕಾಳಿನ ತೂಕ (ಗ್ರಾಂ) | ಕಾಳು ಮತ್ತು ಕಾಯಿಯ ಅನುಪಾತ (%) |
|---|---|---|---|---|---|---|
| ಪ್ರಾತ್ಯಕ್ಷಿಕೆ | 34 | 54.4 | 9 | 30 | 19.7 | 72.5 |
| ರೈತರ ಪದ್ದತಿ | 25 | 50.2 | 7 | 27 | 19.8 | 70.8 |

| ತಳಿಗಳು | ಇಳುವರಿ (ಕ್ವಿ/ಹೆ) | ಹೆಚ್ಚಿನ ಇಳುವರಿ (%) | ನಿವ್ವಳ ಆದಾಯ (ರೂ/ಹೆ) | ಆದಾಯ ವೆಚ್ಚ ಅನುಪಾತ | ತಾಂತ್ರಿಕತೆಯ ಪರಿಣಾಮ (ರೂ/ಹೆ.) |
|---|---|---|---|---|---|
| ಪ್ರಾತ್ಯಕ್ಷಿಕೆ | 97 | 19.8 | 21897 | 2.17 | 5120 |
| ರೈತರ ಪದ್ದತಿ | 8.1 | | 16777 | 1.97 | |

ಕೋಷ್ಟಕ: 05

## ರೈತರ ಅನಿಸಿಕೆಗಳು:

- ರೈತರ ಪದ್ಧತಿಗಿಂತ ಪ್ರಾತ್ಯಕ್ಷಿಕೆ ಪದ್ಧತಿಯಲ್ಲಿ ಹೆಚ್ಚಿನ ಇಳುವರಿ ಬಂದಿರುತ್ತದೆ (ಇಳುವರಿ ಕಡಿಮೆಯಾಗಲು ಬೆಳೆಯ ಸಂದ್ವಗ್ದ ಹಂತದಲ್ಲಿ ಮಳೆಯ ಕೊರತೆ)
- ಬೇಸಾಯದ ಖರ್ಚು ಕಡಿಮೆ (ಸಮ ಪ್ರಮಾಣ ಗೊಬ್ಬರ ಮತ್ತು ಔಷದ ಬಳಕೆ)






**ಚಿತ್ರ : 12**

**ರೈತರಿಂದ ಶೇಂಗಾ ಬೆಳೆಯ ಫಸಲಿನ ವೀಕ್ಷಣೆ**

**ಶಿಡ್ಲಯ್ಯನಕೋಟೆ ಗ್ರಾಮದಲ್ಲಿ ಪರಿಚಯಿಸಿದ ಶೇಂಗಾ ತಳಿಗಳು**

## 8.3 ಮೇವಿನ ಉತ್ಪಾದನೆ ಹೆಚ್ಚಿಸಲು ಮೇವಿನ ಜೋಳದ ತಳಿಯಾದ

**–ಸಿ.ಒ.ಎಫ್.ಎಸ್–31 ತಳಿಯ ಪರಿಚಯ (ಕೆ.ವಿ.ಕೆ. ಲಿಂಕ್ಡ್) (2018)**

| ಕ್ರಮ ಸಂಖ್ಯೆ | ಪ್ರಯೋಗಗಳು | ಗುರಿ | | ಸಾಧನೆ | | ತಳಿಗಳು | ಸ್ಥಳ |
|---|---|---|---|---|---|---|---|
| | | ಕ್ಷೇತ್ರ (ಎ) | ರೈತರ ಸಂಖ್ಯೆ | ಕ್ಷೇತ್ರ (ಎ) | ರೈತರ ಸಂಖ್ಯೆ | | |
| 1 | ಮೇವಿನ ಉತ್ಪಾದನೆ ಹೆಚ್ಚಿಸಲು ಮೇವಿನ ಜೋಳದ ತಳಿಯಾದ – ಸಿ.ಒ.ಎಫ್.ಎಸ್–31 ತಿಳಿಯ ಪರಿಚಯ | 0.5 | 10 | 0.5 | 10 | ಸಿ.ಒ.ಎಫ್.ಎಸ್–31 | ಶಿಡ್ಲಯ್ಯನಕೋಟೆ |

### ಮೇವಿನ ಬೆಳೆಗಳಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು

- ಮೇವಿನ ಬೆಳೆಗಳ ಬಗ್ಗೆ ತಿಳುವಳಿಕೆ ಇಲ್ಲದಿರುವುದ
- ಮೇವಿನ ಬೀಜಗಳ ಅಲಭ್ಯತೆ
- ಉತ್ಪದನಾ ತಾಂತ್ರಿಕತೆಯ ಕೊರತೆ
- ಬರವನ್ನು ತಡೆದುಕೊಳ್ಳುವ ತಳಿಗಳ ಕೊರತೆ

### ಮೇವಿನ ಜೋಳದ ತಳಿಯಾದ ಸಿ.ಒ.ಎಫ್.ಎಸ್.–31 ನ ಪರಿಚಯ

**ವಿಶೇಷ ಗುಣಗಳು:**

- 60 ರಿಂದ 70 ದಿನಗಳಲ್ಲಿ ಬೆಳೆ ಕಟಾವಿಗೆ ಬರುತ್ತದೆ.
- ಕಡಿಮೆ ಫಲವತ್ತತೆಯ ಮಣ್ಣಿನಲ್ಲಿ ಸಹ ಇದನ್ನು ಬೆಳೆಯಬಹುದು.
- ವರ್ಷಕ್ಕೆ 5 ರಿಂದ 6 ಕೂಳೆ ಬೆಳೆ ತಗೆಯಬಹುದು
- ಬರವನ್ನು ತಡೆದು ಕೊಳ್ಳುವ ಶಕ್ತಿ ಹೊಂದಿದೆ.
- ದನಕರುಗಳಿಗೆ ಹೆಚ್ಚು ರುಚಿಕರವಾಗಿತ್ತದೆ.
- ತೆಳುವಾದ ಕಡ್ಡಿ ಹಾಗೂ ಮೃದವಾದ ಎಲೆಗಳನ್ನು ಹೊಂದಿರುತ್ತದೆ.

**ಹೆಚ್ಚಿನ ಇಳುವರಿ ಪಡೆಯಲು ಸುಧಾರಿತ ಬೇಸಾಯ ಕ್ರಮಗಳು**

- ಬೀಜ: 4 ಕಿ.ಗ್ರಾಂ. ಪ್ರತಿ ಎಕರೆಗೆ
- ಬಿತ್ತನೆ ಅಂತರ: 30 10 ಸೆಂ.ಮೀ.
- ಗೊಬ್ಬರಗಳು : 2 ಟನ್ ಕೊಟ್ಟಿಗೆ ಗೊಬ್ಬರ
- ಯುರಿಯಾ : 78 ಕಿ.ಗ್ರಾಂ.
- ಎಸ್.ಎಸ್.ಪಿ. : 125 ಕಿ.ಗ್ರಾಂ.

**ಇಳುವರಿ ಮತ್ತು ಆದಾಯಗಳ ವಿವರ**

| ವಿವರ | ಮೇವಿನ ಇಳುವರಿ (ಟನ್/ಹೆ) | ರುಚಿಕರ (ಶೇ) | ಒಟ್ಟು ನಿವ್ವಳ ಆದಾಯ (ರೂ./ಹೆ) |
|---|---|---|---|
| ಪ್ರಾತ್ಯಕ್ಷಿಕೆ | 81.4 | 89.5 | 24250 |
| ರೈತರ ಪದ್ದತಿ | 62.3 | 82.5 | 18260 |

ಕೋಷ್ಟಕ: 06

**ರೈತರ ಅನಿಸಿಕೆಗಳು:**

- ಹೆಚ್ಚಿನ ಇಳುವರಿ
- ಹೆಚ್ಚು ರುಚಿಕರ
- ಹೆಚ್ಚು ಹಾಲು ಉತ್ಪಾದನೆ
- ಹೆಚ್ಚಿನ ಅದಾಯ (ಬರ ಸಮಯದಲ್ಲಿ)





**ಚಿತ್ರ: 13**

**ಮೇವಿನ ಬೆಳೆಯ ಕ್ಷೇತ್ರೋತ್ಸವ ಮುಖ್ಯ ಅಥಿತಿಗಳು : ಡಾ. ಎಸ್. ಅಯ್ಯಪ್ಪನ್**

## 8.4 ಹೆಸರು ಬೆಳೆಯ ಸಮಗ್ರ ನಿರ್ವಹಣೆ (2018)

| ಕ್ರಮ. ಸಂಖ್ಯೆ | ಪ್ರಯೋಗಗಳು | ಗುರಿ | | ಸಾಧನೆ | | ಪ್ರಯೋಗ | ಸ್ಥಳ |
|---|---|---|---|---|---|---|---|
| | | ಕ್ಷೇತ್ರ (ಎ) | ರೈತರ ಕ್ರಮ ಸಂಖ್ಯೆ | ಕ್ಷೇತ್ರ (ಎ) | ರೈತರ ಸಂಖ್ಯೆ | | |
| 1 | ಹೆಸರು ಬೆಳೆಯ ಸಮಗ್ರ ನಿರ್ವಹಣೆ | 5 | 5 | 5 | 5 | ಟಿ–1: ಪ್ರಾತ್ಯಕ್ಷಿಕೆ<br>ಟಿ–2: ರೈತರ ಪದ್ಧತಿ | ಶಿಡ್ಲಯ್ಯನ ಕೋಟೇ, ಹಿರಿಯೂರು ತಾ. |

**ಹೆಸರು ಬೆಳೆಯಲ್ಲಿ ಚಿತ್ರದುರ್ಗದ ರೈತರು ಎದುರಿಸುತ್ತಿರುವ ಸಮಸ್ಯೆಗಳು:**

- ಹೆಚ್ಚಿನ ಇಳುವರಿ ಕೊಡುವ ತಳಿಗಳ ಕೊರತೆ
- ನಂಜುರೋಗ ತಡೆದುಕೊಳ್ಳುವ ತಳಿಗೆ ಕೊರತೆ
- ಉತ್ಪಾದನಾ ತಾಂತ್ರಿಕತೆ ಕೊರತೆ

**ಹೆಸರು ಬೆಳೆಯಲ್ಲಿ ಪರಿಚಯಿಸಿದ ತಾಂತ್ರಕತೆಗಳು**

**ತಳಿ: ಕೆ.ಕೆ.ಎಮ್–3 ಪರಿಚಯ ಮತ್ತು ಇದರ ವಿಶೇಷ ಗುಣಗಳು**

- ✓ ಬೆಳೆ ಅವಧಿ : 60–65 ದಿನಗಳಲ್ಲಿ ಬೆಳೆ ಕೊಯಿಲಿಗೆ ಬರುತ್ತದೆ.
- ✓ ವೈಶಿಷ್ಟತೆಗಳು : ನಂಜುರೋಗ ತಡೆದುಕೊಳ್ಳುವ ಶಕ್ತಿ ಇದೆ.
- ✓ ಬೀಜ ಪ್ರಮಾಣ : 8 ಕಿ.ಗ್ರಾಂ.
- ✓ ಬೀಜೋಪಚಾರ ಮತ್ತು ಬಿತ್ತನೆ :

- ಪ್ರತಿ ಕಿ.ಗ್ರಾಂ. ಬಿತ್ತನೆ ಬೀಜವನ್ನು 4 ಗ್ರಾಂ ಟ್ರೈಕೋಡರ್ಮಾ, 4 ಗ್ರಾಂ ರೈಜೋಬಿಯಂ ಮತ್ತು 4 ಗ್ರಾಂ ರಂಜಕ ಕರಗಿಸುವ ಅಣುಬೀಜ ಜೀವಾಣುವನ್ನು ಬೀಜಕ್ಕೆ ಉಪಚರಿಸಿ 20 ನಿಮಿಷ ನೆರಳಲ್ಲಿ ಒಗಣಗಿಸಿ.
- ಬೀಗಳನ್ನು 30 ಸೆಂ. ಮೀ. ಅಂತರದ ಸಾಲುಗಳಲ್ಲಿ, ಬೀಜದಿಂದ ಬೀಜಕ್ಕೆ 7.5 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು.

**ಸಮ ಪ್ರಮಾಣದ ಗೊಬ್ಬರ ಬಳಕೆ : ಪ್ರತಿ ಎಕರೆಗೆ:**

- ಕೊಟ್ಟಿಗೆ ಗೊಬ್ಬರ : 2 ಟನ್ (13:25:25 )
- ಯುರಿಯಾ : 15 ಕಿ.ಗ್ರಾಂ.
- ಡಿ.ಎಇ.ಪಿ. : 25 ಕಿ.ಗ್ರಾಂ. ಎಮ್.ಒ.ಪಿ. : 16 ಕಿ.ಗ್ರಾಂ.

➢ ಸತುವಿನ ಸಲ್ಫೇಟ್ : 4

ಇಳುವರಿ ಮತ್ತು ಆದಾಯಗಳ ವಿವರ ಸ್ಥಳ: ಶಿಡ್ಲಯ್ಯನ ಕೋಟೆ

| ವಿವರ | ಗಿಡದ ಎತ್ತರ (ಸೆಂ.ಮೀ) | Days 50% flowering | Days to maturity | ಕಾಯಿಗಳ ಸಂಖ್ಯೆ |
|---|---|---|---|---|
| ಪ್ರಾತ್ಯಕ್ಷಿಕೆ (ಕೆ.ಕೆ.ಎಮ್–3) | 32.8 | 35 | 65 | 17 |
| ರೈತರ ಪದ್ಧತಿ (ಬಿ.ಜಿ.ಎಸ್.–9) | 29.1 | 42 | 74 | 15 |

| ತಳಿಗಳು | ಇಳುವರಿ (ಕ್ವಿ/ಹೆ) | ಹೆಚ್ಚಿನ ಇಳುವರಿ (%) | ನಿವ್ವಳ ಆದಾಯ (ರೂ/ಹೆ) | ಆದಾಯ ವೆಚ್ಚ ಅನುಪಾತ | ತಾಂತ್ರಿಕತೆಯ ಪರಿಣಾಮ (ರೂ/ಹೆ.) |
|---|---|---|---|---|---|
| ಪ್ರಾತ್ಯಕ್ಷಿಕೆ | 6.8 | 28.30 | 19316 | 2.31 | 6022.0 |
| ರೈತರ ಪದ್ಧತಿ | 5.3 | | 13294 | 2.02 | |

ಕೋಷ್ಟಕ: 07

**ರೈತರ ಅನಿಸಿಕೆಗಳು:**

➢ ರೈತರ ಪದ್ಧತಿಗಿಂತ ಪ್ರಾತ್ಯಕ್ಷಿಕೆ ಪದ್ಧತಿಯಲ್ಲಿ ಹೆಚ್ಚಿನ ಇಳುವರಿ ಬಂದಿರುತ್ತದೆ (ಇಳುವರಿ ಕಡಿಮೆಯಾಗಲು ಬೆಳೆಯ ಸಂದ್ಘಗ ಹಂತದಲ್ಲಿ ಮಳೆಯ ಕೊರತೆ)

➢ ಬೇಸಾಯದ ಖರ್ಚು ಕಡಿಮೆ (ಸಮ ಪ್ರಮಾಣದ ಗೊಬ್ಬರ ಮತ್ತು ಬರ ನಿರೋಧಕ ಮತ್ತು ನಂಜುರೋಗ ತಡೆದುಕೊಳ್ಳುವ ತಳಿ)

➢ **ರೈತರು ಸುಮಾರು 6 ಕ್ವಿಂಟಾಲ್ ಬೀಜವನ್ನು ಸುತ್ತ ಮುತ್ತಲಿನ ಹಳ್ಳಿಗಳಿಗೆ ಬಿತ್ತಲು ಕೊಟ್ಟಿದ್ದಾರೆ. ಇದರಿಂದ ರೈತರಿಗೆ ಸರಿಸುಮಾರು 30000–35000 ರೂಗಳು ಲಾಭವಾಗಿದೆ.**



**ಹೆಸರು ಬೆಳೆಯಲ್ಲಿ ಕೀಟ & ರೋಗಗಳ ವಿಶ್ಲೇಷಣೆ**



**ಹೆಸರು ಬೆಳೆ ಕ್ಷೇತ್ರೋತ್ಸವದಲ್ಲಿ ಕೃ.ತೋ.ವಿ. ಶಿವಮೊಗ್ಗದ ವಿಸ್ತರಣಾ ನಿರ್ದೇಶಕರಾದ ಡಾ. ಟಿ.ಹೆಚ್. ಗೌಡ ರವರಿಂದ ರೈತರಿಗೆ ಮಾಹಿತಿ**


ಹೆಸರು ಬೆಳೆ ಕ್ಷೇತ್ರೋತ್ಸವ


ಬರದ ಪರಿಸ್ಥಿತಿಯಲ್ಲಿ ಉತ್ತಮ ಫಸಲು

## 8.5 ಮೂರು ದಿನಗಳ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ :

ಕೃಷಿ ವಿಜ್ಞಾನ ಕೇಂದ್ರ, ಚಿತ್ರದುರ್ಗದ ವತಿಯಿಂದ ಆಯ್ದ ಶಿಡ್ಲಯ್ಯನಕೋಟೆ ಗ್ರಾಮದ ಯುವ ರೈತರಿಗೆ ದಿನಾಂಕ: 21–06–2018 ರಿಂದ 23–06–2018 ರವರೆಗೆ ಎರೆಹುಳ ಗೊಬ್ಬರ (ವರ್ಮಿಕಾಂಪೋಸ್ಟ್) ಉತ್ಪಾದನೆಯ ಕುರಿತು 3 ದಿನಗಳ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ತರಬೇತಿಯಲ್ಲಿ 20 ಯುವ ರೈತರು ಸಕ್ರಿಯವಾಗಿ ಪಾಲ್ಗೊಂಡರು ಮತ್ತು ಎರೆಹುಳು ಘಟಕವನ್ನು ನಿರ್ಮಿಸುವ ವಿಧಾನಗಳು, ಗೊಬ್ಬರದ ಉತ್ಪಾದನೆ, ಕಸವನ್ನು ತೊಟ್ಟಿಯಲ್ಲಿ ತುಂಬಿಸುವ ವಿಧಾನ, ಎರೆಹುಳುಗಳನ್ನು ಬೆರೆಸುವ ಮತ್ತು ಗೊಬ್ಬರದ ಉತ್ಪಾದನೆಯ ನಂತರ ಎರೆಹುಳುಗಳನ್ನು ಬೇರ್ಪಡಿಸುವ ವಿಧಾನಗಳ ಕುರಿತು ತರಬೇತಿ ನೀಡಲಾಯಿತು.

ತರಬೇತಿ ಪೆದ ಯುವ ರೈತರು ಕೃಷಿ ಇಲಾಖೆಯ ಸಹಾಯಧನ ಪಡೆದು ಎರೆಹುಳು ತೊಟ್ಟಿಗಳನ್ನು ನಿರ್ಮಿಸಿಕೊಂಡು ಎರೆಹುಳು ಗೊಬ್ಬರ ತಯಾರಿಸುತ್ತಿದ್ದಾರೆ.

### ನಿರ್ವಹಣೆ ವೆಚ್ಚ:

| ಕ್ರಮ. ಸಂಖ್ಯೆ | ವಿವರಣೆ | ವೆಚ್ಚ | ವೆಚ್ಚ ( 2ನೇ ಕೊಯ್ಲು) |
|---|---|---|---|
| 1 | ತೊಟ್ಟಿ ನಿರ್ಮಾಣ ವೆಚ್ಚ (10x4x3)(LXBXH) ft | 3000 | 0 |
| 2 | ತೊಟ್ಟಿಗೆ ಕೃಷಿ ತ್ಯಾಜ್ಯತುಂಬಿಸುವ ವೆಚ್ಚ (2ಕೂಲಿ ಆಳು) | 600 | 600 |
| 3 | ನೀರು ಹಾಕುವ ವೆಚ್ಚ (ವಾರಕ್ಕೆ ಒಂದು ಬಾರಿ) 90 ದಿನಗಳಿಗೆ | 2800 | 2800 |
| 4 | ಏರೆ ಹುಳ (3kg) | 900 | 0 |

| | | | |
|---|---|---|---|
| 5 | ಏರೆ ಹುಳಗೊಬ್ಬರ **ಕೊಯ್ಲು** ಹಾಗು ಸ್ವಚ್ಚಾತೆ ವೆಚ್ಚ (2ಕೂಲಿ ಆಳು) | 600 | 600 |
| | **Total** | 7900 | 4000 |
| | **ಒಟ್ಟು ವೆಚ್ಚ 1st and 2nd ಕೊಯ್ಲು 7900+4000 = 11900** | | |

## ಏರೆಹುಳು ಗೊಬ್ಬರ ಮಾರಾಟ

ಪ್ರತಿ ಕೆ.ಜಿ. ಏರೆ ಹುಳ ಗೊಬ್ಬರ = 8 ರೂ

ಮೊದಲನೆ ಕೊಯ್ಲು 1000 ಕೆ.ಜಿ. = 1000 * 8 = ರೂ. 8000

ಎರಡನೆ ಕೊಯ್ಲು 1000 ಕೆ.ಜಿ. = 1000 * 8 = ರೂ. 8000

ಒಟ್ಟು ಎರಡು ಕೊಯ್ಲುನಿಂದ 2000 * 8 = ರೂ. 16000

## ನಿವ್ವಳ ಆದಾಯ

ಒಟ್ಟು ಮಾರಾಟ = 16000

ಉತ್ಪಾದನೆಯ ಒಟ್ಟು ವೆಚ್ಚ = 11900

ನಿವ್ವಳ ಲಾಭ = 16000–11900 = ರೂ. 4100

ಎರೆಹುಳು ಗೊಬ್ಬರ ಉತ್ಪಾದನೆಯಿಂದ ರೈತರಿಗೆ ಇಳುವರಿ ಹೆಚ್ಚಾಗಿದ್ದು ರಸಗೊಬ್ಬರಗಳನ್ನು ಕೊಂಡುಕೊಳ್ಳುವ ವೆಚ್ಚ ಗಣನೀಯವಾಗಿ ಕಡಿಮೆಯಾಗಿದೆ. ಮಳೆಯ ಕೊರತೆಯಾದಾಗ ಎರೆ ಗೊಬ್ಬರ ಬಳಸಿದ ತಾಕುಗಳಲ್ಲಿ ಉತ್ತಮವಾದ ಫಸಲು ಪಡೆದಿದ್ದರಿಂದ ಎರೆಹುಳು ಗೊಬ್ಬರ ಬಳಕೆಗೆ ಆಸಕ್ತಿ ಹೆಚ್ಚಾಗಿದೆ.





**ಚಿತ್ರ: 15**

**ಎರೆಹುಳು ಗೊಬ್ಬರ ಉತ್ಪಾದನೆ ಕುರಿತು ಶಿಡ್ಲಯ್ಯನಕೋಟೆ ಗ್ರಾಮದಲ್ಲಿ ಯುವ ರೈತರಿಗೆ ಮೂರು ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ**

## 8.6 ಮುಂಗಾರು ಹಂಗಾಮಿಗೆ ಪರ್ಯಾಯ ಬೆಳೆ ಯೋಜನೆ ಕುರಿತು

**ಕಾರ್ಯಗಾರ : (ದಿನಾಂಕ: 30–06–2018)**

ಡಾ. ರುದ್ರೇಗೌಡ, ವಿಜ್ಞಾನಿ (ಬೇಸಾಯ ಶಾಸ್ತ್ರ) ಮತ್ತು ಡಾ. ಪ್ರಕಾಶ್ ಕೆರೂರೆ ವಿಜ್ಞಾನಿ (ತೋಟಗಾರಿಕೆ) ಈ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಬಂದಿದ್ದರು. ಅವರು ಮುಂಗಾರು ಹಂಗಾಮಿನ ಬೆಳೆಗಳಾದ ನೆಲಗಡಲೆ, ತೊಗರಿ, ಈರುಳ್ಳಿ, ಹತ್ತಿ, ರಾಗಿ ಬೆಳೆಗಳ ತಂತ್ರಜ್ಞಾನದ ಬಗ್ಗೆ ವಿವರಿಸಿದರು.

ತರಬೇತಿಯಲ್ಲಿ 25 ರೈತರು ಭಾಗವಹಿಸಿದ್ದರು.




**ಚಿತ್ರ : 16**
**ಮುಂಗಾರು ಹಂಗಾಮಿಗೆ ಪರ್ಯಾಯ ಬೆಳೆ ಯೋಜನೆಯ ಕಾರ್ಯಗಾರ**

## 8.7 ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ಮಾನ್ಸೂನ್ ಬಗ್ಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮ:

ಶಿಡ್ಲಯ್ಯನಕೋಟೆ ಗ್ರಾಮದಲ್ಲಿ ದಿನಾಂಕ: 05–06–2018 ರಂದು ಭಾರತೀಯ ಮೆಟ್ರೋಲಾಜಿಕಲ್ ವಿಭಾಗದ ಸಹಯೋಗದೊಂದಿಗೆ ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ಮಾನ್ಸೂನ್ ಬಗ್ಗೆ ತರಬೇತಿಗೆ ಹಾಜತರಾಗಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ಮಟ್ರೊಲಾಜಿಕಲ್ ವಿಭಾಗದನ ಸಂಪನ್ಮೂಲ ವ್ಯಕ್ತಿಯು ಮಾನ್ಸೂನ್‌ನಲ್ಲಿ ಸಭವಿಸುವ ಬದಲಾವಣೆಗಳ ಬಗ್ಗೆ ವಿವರಿಸಿದರು ಮತ್ತು ಹೊಲಗಳಲ್ಲಿ ಸಸಿಗಳನ್ನು ನೆಡುವುದರ ಮೂಲಕ ಜಾಗತಿಕ ತಾಪಮಾನವನ್ನು ಹೇಗೆ ನಿಯಂತ್ರಿಸಬೇಕು ಎಂಬುದನ್ನು ವಿವರಿಸಿದರು.




ಚಿತ್ರ : 17

**ಹವಮಾನ ವೈಪರಿತ್ಯಾ ಅರಿವು ಕುರಿತು ತರಬೇತಿ ಕಾರ್ಯಕ್ರಮ**

## 8.8 ದೃಶ್ಯಮಾಧ್ಯಮ ಸಹಾಯದಿಂದ ರೈತರಿಗೆ ಕೃಷಿ ಆಧಾರಿತ ಚಿತ್ರವೀಕ್ಷಣೆ

ದೃಶ್ಯಮಾಧ್ಯಮ ಸಹಾಯದಿಂದ ರೈತರಿಗೆ ಕೃಷಿ ಆಧಾರಿತ ಚಿತ್ರವೀಕ್ಷಣೆಯನ್ನು ಮಾಡಿಲಾಗುತ್ತಿದೆ. ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಆಧಾರಿತ ಚಿತ್ರಗಳು, ಹೊಸ ತಂತ್ರಜ್ಞಾನಗಳು ಪ್ರಗತಿ ಪರ ರೈತರ ಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಪ್ರತಿ ಬಾರಿಯೂ 15 ರಿಂದ 20 ಜನ ರೈತರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.

## 8.9 ಹೆಸರು ಬೆಳೆಯ ಕ್ಷೇತ್ರೋತ್ಸವ (KKM-3)

ಶಿಡ್ಲಯ್ಯನಕೋಟೆ ಗ್ರಾಮದಲ್ಲಿ ದಿನಾಂಕ: 17.07.2008 ರಂದು KKM-3 ತಳಿಯ ಹೆಸರು ಬೆಳೆಯ ಕ್ಷೇತ್ರೋತ್ಸವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ KKM-3 ತಳಿಯ ಹೆಸರು ಬೆಳೆಯ ಹೊಸ ವೈವಿಧ್ಯತೆಯ ಪರಿಚಯವನ್ನು ಮಾಡಿಕೊಡಲಾಯಿತು. ಈ ಬೆಳೆಯನ್ನು ಕಡಿಮೆ ನೀರು ಬಳಕೆಯ ಮತ್ತು ನಿರ್ವಹಣೆಯೊಂದಿಗೆ ರೈತ 60 ದಿನಗಳಲ್ಲಿ ಬೆಳೆ ಪಡೆಯಬಹುದೆಂದು ಮುಂಚೂಣಿ ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 80–90 ರೈತರು ಭಗವಹಿಸಿದ್ದರು ಮತ್ತು ಮುಂಬರುವ ಮುಂಗಾರು ಋತುವಿನ್ಲಲಿ ಹೆಸರು ಬೆಳೆಯನ್ನು ಬೆಳೆಯಲು ಆಸಕ್ತಿ ತೋರಿಸಿದರು.




ಚಿತ್ರ : 18

**ಹೆಸರು ಬೆಳೆಯ ಕ್ಷೇತ್ರೋತ್ಸವ**

## 8.10 ಕ್ಷೇತ್ರ ಭೇಟಿಗಳು



ಹೆಸರು ಬೆಳೆಯ ತಾಕು



ಹತ್ತಿಬೆಳೆಯ ತಾಕು



ಟೊಮ್ಯಾಟೋ ಬೆಳೆಯ ತಾಕು



ರೈತರಿಗೆ ತೊಗರಿ ಬೆಳೆಯಲ್ಲಿ ಕಾಯಿ ಕೊರಕ ಹುಳಗಳನ್ನು ಗುರುತಿಸುವುದನ್ನು ತೋರಿಸಲಯಿತು

ಚಿತ್ರ : 19

# 9. ಪೌಷ್ಟಿಕ ತೋಟ

ತೋಟಗಾರಿಕೆ ಇಲಾಖೆಯಿಂದ ಸುಮಾರು 72 ರೈತರಿಗೆ ತರಕಾರಿ ಬೀಜಗಳನು ಮಿನಿಕಿಟ್ ಯೋಜನೆಯಡಿಯಲ್ಲಿ ವಿತರಿಸಲಾಯಿತು. ಇವರಲ್ಲಿ 10 ನೀರಾವರಿ ರೈತರು ತಮ್ಮ ಜಮೀನಿನಲ್ಲಿ ಒಂದು ಗುಂಟೆ ಭಾಗದಲ್ಲಿ 5 ವಿಧದ ತರಕಾರಿ (ಬದನೆ, ಮೆಣಸಿನಕಾಯಿ, ಬೆಂಡೆ, ಟೊಮಟೊ, ಜವಳಿಕಾಯಿ ಇತ್ಯಾದಿ) ಬೆಳೆಗಳನ್ನು ಬೆಳೆದು ಪೌಷ್ಟಿಕಾಂಶದ ತೋಟವನ್ನು ಅಭಿವೃದ್ಧಿಪಡಿಸಿದರು. ಈ ತೋಟದಿಂದ ರೈತರ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದೆ ಅಲ್ಲದೆ ಅವರ ದಿನ ನಿತ್ಯದ ಖರ್ಚು ಕಡಿಮೆ ಆಗಿದ್ದು ಆದಾಯ ಗಳಿಸಿದ್ದರೆ. ಉಳಿದ ರೈತರು ಮಳೆಯಾಶ್ರಿತ ಆದ ಕಾರಣ ಬೆಳೆಯನ್ನು ಬೆಳೆಯಲು ಸಾಧ್ಯವಾಲಿಲ್ಲ. ಅವರು ತಮ್ಮ ಮನೆಗಳ ಮುಂದೆ ಮತ್ತು ಬದುಗಳಲ್ಲಿ ತರಕಾರಿಗಳನ್ನು ಬೆಳೆದುಕೊಂಡು ಉಪಯೋಗ ಪಡೆದುಕೊಂಡಿದ್ದಾರೆ.

**ವಿವರಗಳು:**

| ಕ್ರ.ಸಂ. | ರೈತರ ಹೆಸರು | ತರಕಾರಿ ಖರ್ಚು (ಪ್ರತಿ ತಿಂಗಳು) | | ಉಳಿತಾಯ (ರೂ) |
|---|---|---|---|---|
| | | ತರಕಾರಿ ತೋಟವನ್ನು ಅಭಿವೃದ್ಧಿ ಪಡಿಸುವ ಮುಂಚೆ | ತರಕಾರಿ ತೋಟವನ್ನು ಅಭಿವೃದ್ಧಿ ಪಡಿಸಿದ ನಂತರ | |
| 1 | ರಾಘವೇಂದ್ರ | 500–700 | 200–300 | 200–400 |
| 2 | ಆಜಯ | 400–600 | 200 | 400 |
| 3 | ಪ್ರಕಾಶ.ಈ | 600–700 | 300–350 | 350 |
| 4 | ನಾಗಭುಷಣ | 400–600 | 250–300 | 300 |
| 5 | ಕಾಂತರಾಜು | 500–700 | 200–300 | 200–400 |
| 6 | ಮಲ್ಲಿಕಾರ್ಜುನ | 400–600 | 250–300 | 300 |
| 7 | ವಿರೇಶ | 500–700 | 200–300 | 400 |
| 8 | ಗೋವಿಂದರಾಜು | 600–700 | 300–350 | 350 |
| 9 | ಪ್ರಕಾಶ | 500–700 | 200–300 | 400 |
| 10 | ಹರೀಶ | 400–600 | 200 | 400 |

ಕೋಷ್ಠಕ : 09

ರೈತರು ತಮ್ಮ ಕೈತೋಟದಲ್ಲಿ ಬೆಳೆದ ವಿವಿಧ ತರಕಾರಿಗಳನ್ನು ಬೆಳೆದು ಮನೆಗೆ ಉಪಯೋಗಿಸಿಕೊಂಡು ಮಾಸಿಕ ತರಕಾರಿ ವೆಚ್ಚವನ್ನು ಕಡಿಮೆ ಮಾಡಿಕೊಂಡಿದ್ದಾರೆ. ಅಲ್ಲದೇ ಉಳಿದ

ತರಕಾರಿಗಳನ್ನು ಮಾರುಕಟ್ಟೆಯಲ್ಲಿ ಮಾರುವುದರ ಮೂಲಕ ಮಾಸಿಕ ರೂ. 1100/– ರಿಂದ 1500/– ಗಳವರೆಗೆ ಆದಾಯ ವೃದ್ಧಿಸಿಕೊಂಡಿರುತ್ತಾರೆ.





**ಚಿತ್ರ : 20**
**ಶ್ರೀ. ರಾಘವೇಂದ್ರ ರವರ ಪೌಷ್ಠಿಕ ತೊಟದಲ್ಲಿ ಮೆಣಸಿನಕಾಯಿ, ಬದನೆ ಹಾಗೂ ಇತರೆ ತರಕಾರಿಗಳನ್ನು ಬೆಳೆದಿರುವುದು.**

## 10. ಪ್ರೋತ್ಸಾಹ ಕಿಟ್

ದಿನಾಂಕ : 03–10–2018 ರ ಸಭೆಯಲ್ಲಿ 150 ಕುಟುಂಬಕ್ಕೆ ಪ್ರೋತ್ಸಾಹ ಕಿಟ್‌ಗಳ ವಿತರಣೆಯ ನಿರ್ಧಾರ ತೆಗೆದುಕೊಳ್ಳಾಗಿದೆ. ಪ್ರೋತ್ಸಾಹ ಕಿಟ್‌ನಲ್ಲಿ ಉತ್ತಮ ಗುಣಮಟ್ಟದ ಕೈಚೀಲ, 1 ಸಂಯೋಜಿತ ಅಭ್ಯಾಸಗಳ ಪ್ಯಾಕೇಟಜ್ ಪುಸ್ತಕ (POP), ಲಭ್ಯವಿರುವ ಸರ್ಕಾರಿ ಯೋಜನೆಗಳ ಮಾಹಿತಿ ಪುಸ್ತಕ, ಸಿರಿ ಧಾನ್ಯಗಳ ಮೌಲ್ಯವರ್ಧನೆ ಪುಸ್ತಕ (ಚಿತ್ರದುರ್ಗಕ್ಕೆ) ಇತ್ಯಾದಿಗಳನ್ನು ವಿತರಿಸಲಾಗುವುದು. ಪ್ರತಿ ಕಿಟ್‌ಗೆ ರೂ. 1000 ವೆಚ್ಚ ಮಾಡಲಾಗಿದೆ.






**ಚಿತ್ರ : 21**

**ಪ್ರೋತ್ಸಾಹ ಕಿಟ್**

## 11. ಗ್ರಾಮದಲ್ಲಿ ಜಾರಿಗೆ ತರಲಾದ ಸರ್ಕಾರಿ ಕಾರ್ಯಕ್ರಮಗಳ ವಿವರಗಳು

| ಕ್ರ. ಸಂ. | ಕಾರ್ಯಕ್ರಮದ ಹೆಸರು | ವಿಭಾಗ | ಫಲಾನುಭವಿಗಳ ನೊಂದಣಿ ಸಂಖ್ಯೆ | ಮಂಜೂರಾದ ಮೊತ್ತ | ಪ್ರಯೋಜನಗಳ ಸಂಕ್ಷಿಪ್ತ ವಿತರಣೆ |
|---|---|---|---|---|---|
| 1 | ಕೃಷಿ ಭಾಗ್ಯ | ಕೃಷಿ | 35 ಅರ್ಜಿ ಸಲ್ಲಿಕೆ (15 ನಿರ್ಮಿಸಲಾಗಿದೆ) | ರೂ. 60,000/- ಪ್ರತಿ ಫಲಾನುಭವಿಗೆ | ರೈತರ ಹೊಲಗಳಲ್ಲಿ ಕ್ರಷಿ ಹೊಂಡವನ್ನು ನಿರ್ಮಿಸಲು ಸಹಯಧ ನೀಡಲಾಗಿದೆ. |
| 2 | ಸೂಕ್ಷ್ಮ ನೀರಾವರಿ (ಸಿಂಪರಣಾ ಸೆಟ್) | ಕೃಷಿ | 30 ಅರ್ಜಿ ಸಲ್ಲಿಕೆ (10 ನಿರ್ಮಿಸಲಾಗಿದೆ) | ರೂ. 2,800/- ಪ್ರತಿ ಫಲಾನುಭವಿಗೆ | ಸ್ಪಿಂಕ್ಲರ್ ಸೆಟ್ ಅನ್ನು ರೈತರಿಗೆ ವಿತರಿಸಲಾಗಿದೆ. |
| 3 | ಎರೆಹುಳು ಗೊಬ್ಬರದ ಘಟಕ (ಪಿಪಿಪಿ-ಐಎಡಿ ಯೋಜನೆ) | ಕೃಷಿ | 100 ಮಂಜೂರಾಗಿದೆ ಇಲ್ಲವಯವರೆಗೆ (10 ನಿರ್ಮಸಲಾಗಿದೆ) | ರೂ. 8,000/- ಪ್ರತಿ ಫಲಾನುಭವಿಗೆ | 15 * 8 ಅಡಿ ಎರೆಹುಳು ಗೊಬ್ಬರದ ಘಟಕವನ್ನು ರೈತ ನಿರ್ಮಿಸುತ್ತಿದ್ದಾರೆ. |
| 4 | ಬೀಜಗಳ ವಿತರಣೆ (NFSM ) ಶೆಂಗಾ ಮತ್ತು ತೊಗರಿ | ಕೃಷಿ | 50 | ರೂ. 4,000/- ಪ್ರತಿ ಫಲಾನುಭವಿಗೆ | ಗುಣಮಟ್ಟದ ಬೀಜಗಳನ್ನು ವಿತರಿಸಲಾಯಿತು |
| 5 | NREGA ದಡಿ ಕೃಷಿ ಹೊಂಡ | ಪಂಚಾಯಿತಿ/ ಕೃಷಿ | 2 | ರೂ. 60,000/- ಪ್ರತಿ ಫಲಾನುಭವಿಗೆ | ಉದ್ಯೋಗ ಖಾತರಿ ಕಾರ್ಡ್ ಸಮಸ್ಯೆಯಿಂದಾಗಿ ಅನುಷ್ಠಾನಗೊಂಡಿಲ್ಲ |
| 6 | NREGA ದಡಿ ಬದು ನಿರ್ಮಾಣ | ಪಂಚಾಯಿತಿ / ಕೃಷಿ | 2 | ರೂ. 30,000/- ಪ್ರತಿ ಫಲಾನುಭವಿಗೆ | ಉದ್ಯೋಗ ಖಾತರಿ ಕಾರ್ಡ್ ಸಮಸ್ಯೆಯಿಂದಾಗಿ ಅನುಷ್ಠಾನಗೊಂಡಿಲ್ಲ |
| **ತೋಟಗಾರಿಕಾ ಇಲಾಖೆ** | | | | | |
| 1 | ತರಕಾರಿ ಬೀಜಗಳ ವಿತರಣೆ (ಮಿನಿಕಿಟ್ ಯೋಜನೆ) | ತೋಟಗಾರಿಕೆ | 72 | ರೂ. 1,500/- ಪ್ರತಿ ಕಿಟ್ | ಪೌಷ್ಠಿಕಾಂಶದ ಉದ್ಯಾನವನ್ನು ಅಭಿವೃದ್ಧಿಪಡಿಸಲು ರೈತರಿಗೆ 5 ವಿಧದ ತರಕಾರಿ ಬೀಜಗಳನ್ನು ವಿತರಿಸಲಾಯಿತು |
| 2 | NREGAದಡಿ ಈರುಳ್ಳಿ ಶೆಡ್ ನಿರ್ಮಾಣ | ಪಂಚಾಯಿತಿ/ ತೋಟಗಾರಿಕೆ | 6 | 60,000/- ಪ್ರತಿ ಫಲಾನುಭವಿಗೆ | ಉದ್ಯೋಗ ಖಾತರಿ ಕಾರ್ಡ್ ಸಮಸ್ಯೆಯಿಂದಾಗಿ |

| | | | | | |
|---|---|---|---|---|---|
| | | | | | ಅನುಷ್ಠಾನಗೊಂಡಿಲ್ಲ |
| 3 | NREGA ದಡಿ ತೆಂಗಿನ ಸಸಿ ನಾಟಿ | ಪಂಚಾಯಿತಿ / ತೋಟಕಾರಿಕೆ | 3 | 30,000/– | ಉದ್ಯೋಗ ಖಾತರಿ ಕಾರ್ಡ್ ಸಮಸ್ಯೆಯಿಂದಾಗಿ ಅನುಷ್ಠಾನಗೊಂಡಿಲ |
| **ಅರಣ್ಯ ಇಲಾಖೆ** | | | | | |
| 1 | ಸಾಮಾಜಿಕ ಅರಣ್ಯ | ಅರಣ್ಯ | 5 | ಉಚಿತ | ವಿವಿಧ ಜಾತಿಯ ಅರಣ್ಯ ಸಸಿಗಳನ್ನು ರೈತರಿಗೆ ವಿತರಿಸಲಾಯಿತು |

| | | | | | |
|---|---|---|---|---|---|
| **ಪಶುಸಂಗೋಪನಾ ಇಲಾಖೆ** | | | | | |
| 1 | ಪಶು ಭಾಗ್ಯ | ಪಶು ಸಂಗೋಪನೆ | 3 | ರೂ. 60,000/– ಸಾಲವಾಗಿ ಪ್ರತಿ ರೈತನಿಗೆ | 3 ಮಿಶ್ರ ತಳಿ ಹಸುವನ್ನು ವಿತರಿಸಲಾಗಿದೆ. |
| 2 | ಕೋಳಿ ಸಾಕಾಣಿಕೆ | ಪಶುಸಂಗೋಪನೆ | 5 | ಉಚಿತ | 5 ಗಿರಿರಾಜ ತಳಿ ಮರಿಗಳನ್ನು 5 ರೈತರಿಗೆ ವಿತರಿಸಲಾಗಿದೆ |
| 3 | NREGA ದಡಿ ದನದ ಕೊಟ್ಟಿಗೆ | ಪಶುಸಂಗೋಪನೆ / ಪಂಚಾಯಿತಿ | 1 | 60,000/–ಪ್ರತಿ ರೈತನಿಗೆ | ಉದ್ಯೋಗ ಖಾತರಿ ಕಾರ್ಡ್ ಸಮಸ್ಯೆಯಿಂದಾಗಿ ಅನುಷ್ಠಾನಗೊಂಡಿಲ್ಲ |
| **ಕರ್ನಾಟಕ ಸೋಪ್ ಮತ್ತು ಡಿಟರ್ಜೆಂಟ್ ಲಿಮಿಟೆಡ್ (ಕೆಎಸ್‌ಡಿಎಲ್) ಬೆಂಗಳೂರು** | | | | | |
| 1 | ಶ್ರೀಗಂಧದ ಮರದ ಮರು ಖರೀದಿ | ಕೆಎಸ್‌ಡಿಎಲ್ | 1 | | 1.5 ಎಕರೆ ಭೂಮಿಯಲ್ಲಿ 2000 ಶ್ರೀಗಂಧದ ಸಸಿಗಳನ್ನು ನೆಡಲಾಗಿದೆ 10 ವರ್ಷಗಳ ನಂತರ ಸುಮಾರು ರೂ. 6–8 ಕೋಟಿ ಆದಾಯವನ್ನು ನಿರೀಕ್ಷಿಸಲಾಗಿದೆ. |

# ಕೃಷಿ ಇಲಾಖೆ ಮತ್ತು WE CARE NGO ಬೆಂಗಳೂರು ಸಹಯೋಗದೊಂದಿಗೆ ಪಿಪಿಪಿ–ಪಿಐಡಿ ಮಿಲ್ಲೆಟ್ಸ್ ಯೋಜನೆ.

ಈ ಯೋಜನೆಯಲ್ಲಿ ನಾವು ನಮ್ಮ ನೊಂದಾಯಿತ ರೈತ ಸಮಾಜದಿಂದ 200 ಜನ ಸಿರಿಧಾನ್ಯ ಬೆಳೆಗಾರರನ್ನು ಕರ್ನಾಟಕ ಕೃಷಿ ಬೆಲೆ ಆಯೋಗ ಮತ್ತು ಕೃಷಿ ವಿಜ್ಞಾನ ಕೇಂದ್ರ ಮಾರ್ಗದರ್ಶನದ ಮೂಲಕ ಸೇರಿಸಲಾಗಿದೆ. ಈ ಯೋಜನೆಯಿಂದ ನೊಂದಾಯಿತ ರೈತರಿಗೆ ಕೃಷಿ ಇಲಾಖೆ ಮೂಲಕ ಬೀಜಗಳು, ರಸಗೊಬ್ಬರ, ಎರೆಹುಳು ಘಟಕ ಇತ್ಯಾದಿ ಪರಿಕರಗಳನ್ನು ರೈತರಿಗೆ ಒದಗಿಸಿಕೊಡಲಾಗುತ್ತಿದೆ. ಕೃಷಿ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಸಾವಯವ ಸಿರಿ ಧಾನ್ಯ ಉತ್ಪಾದನೆಗೆ ಸಂಬಂಧಿಸಿದಂತೆ ತರಬೇತಿಗಳನ್ನು ನೀಡಲಾಗುತ್ತಿದೆ. (ಪಂಚಗವ್ಯ, ಜೀವಮೃತ, ವರ್ಮಿಕಂಪೋಸ್ಟ್ ಇತ್ಯಾದಿ).




**ಶ್ರೀಮತಿ ಭಾಗ್ಯಮ್ಮ ರವರು ಪಿಪಿಪಿ–ಐಎಡಿ ಯೋಜನೆಯಡಿ ಎರೆಹುಳು ಗೊಬ್ಬರ ಘಟಕವನ್ನು ಸ್ಥಾಪಿಸಲಾಗಿದೆ.**




**ಚಿತ್ರ : 22**

**ಶ್ರೀ. ಈರಣ್ಣ ರವರು ಪಿಪಿಪಿ–ಐಎಡಿ ಯೋಜನೆಯಡಿ ಎರೆಹುಳು ಗೊಬ್ಬರ ಘಟಕವನ್ನು ಸ್ಥಾಪಿಸಲಾಗಿದೆ.**




ಪಿಪಿಪಿ–ಐಎಡಿ ಯೋಜನೆಯಡಿ ಡಾ. ರುದ್ರಗೌಡ ರವರಿಂದ ಜೀವಾಮೃತ ತಯಾರಿಸುವ ತರಬೇತಿ



ಪಿಪಿಪಿ–ಐಎಡಿ ಯೋಜನೆಯಡಿ ಡಾ. ಅಭಿಷೇಕ್ ರವರಿಂದ ಮಾರುಕಟ್ಟೆ ನಿರ್ವಹಣೆ ಕುರಿತು ತರಬೇತಿ



**ಚಿತ್ರ : 23**

ಪಿಪಿಪಿ–ಐಎಡಿ ಯೋಜನೆಯಡಿ ರೈತರಿಗೆ ಕಿಟ್‌ಗಳ ವಿತರಣೆ

# 12. ಕರ್ನಾಟಕ ಸೋಪ ಮತ್ತು ಡಿಟರ್ಜೆಂಟ್ ಲಿಮಿಟೆಡ್

# (ಕೆ.ಎಸ್.ಡಿ.ಎಲ್) ಬೆಂಗಳೂರು:–

ಶ್ರೀ ಶಿವಮೂರ್ತಿ ಯವರು 1.5 ಎಕರೆ ಭೂಮಿಯಲ್ಲಿ 2000 ಶ್ರೀಗಂಧದ ಸಸಿಗಳನ್ನು ನೆಡಸಲಾಗಿದೆ 10 ವರ್ಷಗಳ ನಂತರ ಸುಮಾರು ರೂ. 6–8 ಕೋಟಿ ಆದಾಯವನ್ನು ನಿರೀಕ್ಷಿಸಲಾಗಿದೆ. ಇತರೆ ರೈತರು ಈ ಮುಂಗಾರಿನಲ್ಲಿ ಶ್ರೀಗಂಧ ಸಸಿಗಳನ್ನು ನೆಡಲು ಆಸಕ್ತಿ ತೋರಿಸುತ್ತಿದ್ದಾರೆ.

ಕೆವಿಕೆ ಅವರ ಶಿಫಾರಸ್ಸಿನ ಪ್ರಕಾರ, ರೈತ ದಾಳಿಂಬೆ ಗಿಡವನ್ನು ಅಂತರ ಬೆಳೆಯಾಗಿನೆಟ್ಟಿದ್ದಾನೆ. ಇದರಿಂದಾಗಿ ರೈತನು ಮುಂದಿನ ಸತತ ವರ್ಷದಿಂದ ಶ್ರೀಗಂಧದ ಮರವು ಪ್ರಬುದ್ಧವಾಗುವವರೆಗೆ ಆದಾಯವನ್ನು ಪಡೆಯಬಹುದಾಗಿದೆ. ನಮ್ಮ ಯೋಜನೆಯ ಕಾರಣದಿಂದಾಗಿ ಬೈ ಬ್ಯಾಕ್ ಸಿಸ್ಟಮ್ ಅನ್ನು ಪರಿಚಯ ಮಾಡಲಾಗಿದೆ.





**ಚಿತ್ರ : 24**

**ಶ್ರೀ. ಶಿವಮೂರ್ತಿ ಯವರ ಶ್ರೀಗಂಧದ ತಾಕು**

**ಶ್ರೀಗಂಧ ಮತ್ತು ದಾಳಿಂಬೆಯ ಅಂತರ ಬೆಳೆ**

## 13. ಸಭೆ/ ಕಾರ್ಯಾಗಾರಗಳು / ಸಮ್ಮೇಳನ / ಭೇಟಿಗಳು : –

### 13.1 ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆಯಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ ಬೆಂಗಳೂರಿನಲ್ಲಿ 2017 ರ ಜೂನ್ 24 ಮತ್ತು 25 ರಂದು ನಡೆದ 2 ದಿನಗಳ ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಆಯ್ಕೆಯಾದ ಎಲ್ಲಾ 25 ರೈತರನ್ನು ಕಾರ್ಯಾಗಾರಕ್ಕೆ ಕರೆತರಲಾಯಿತು. ವರ್ಷವಿಡೀ ಸಣ್ಣ ಭೂಮಾಲೀಕರು ಹೇಗೆ ಆದಾಯವನ್ನು ಗಳಿಸಬಹುದು, ಕೃಷಿ ವೆಚ್ಚವನ್ನು ಹೇಗೆ ಕಡಿಮೆ ಮಾಡಬಹುದು, ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ, ಡಾ. ಅಶೋಕ್ ದಳವಾಯಿ, ಡಾ. ಎಸ್. ಅಯ್ಯಪ್ಪನ, ಡಾ. ಚಂದ್ರಕಾತ್, ಡಾ. ಪ್ರಕಾಶ್ ಕಮ್ಮರಡಿ ಮೊದಲಾದವರು ವಿಷಯಗಳನ್ನು ಪ್ರಸ್ತುತ ಪಡಿಸಿದರು. ರೈತರು ಮತ್ತು ವಿಜ್ಞಾನಿಗಳ ನಡುವ ಸಂವಾದ ನಡೆಸಲಾಯಿತು.



**ಚಿತ್ರ : 25**
**ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ ಬೆಂಗಳೂರಿನಲ್ಲಿ ನಡೆದ 2 ದಿನಗಳ ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ಶಿಡ್ಲಯ್ಯನಕೋಟೆ ಗ್ರಾಮದ ರೈತರು.**

### 13.2 ಪ್ಲಸ್ ಟ್ರಸ್ಟ್ ಬೆಂಗಳೂರು ತಂಡದ ಭೇಟಿ

ಪ್ಲಸ್ ಟ್ರಸ್ಟ್ ಬೆಂಗಳೂರಿನ ಡಾ. ಟಿ.ಕೆ. ಪ್ರಭಾಕರ್ ಶೆಟ್ಟಿ ಮತ್ತು ಡಾ. ಸತ್ಯನಾರಾಯಣ ಅವರು ಆಗಸ್ಟ್ 11, 2017 ರಂದು ಶಿಡ್ಲಯ್ಯನ ಕೋಟೆಗೆ ಭೇಟಿ ನೀಡಿ ಸಮಗ್ರ ಕೃಷಿ ಪದ್ಧತಿಯ ಬಗ್ಗೆ ತರಬೇತಿ ನೀಡಿದರು ಮತ್ತು ಆಯ್ದ ಪ್ರತಿಯೊಬ್ಬ ರೈತರಿಗೆ ಸಮಗ್ರ ಕೃಷಿ ಪದ್ಧತಿಯ ಮಾದರಿಯನ್ನು ಸೂಚಿಸಿದರು. 11 ಆಗಸ್ಟ್ 2017 ರಂದು ಪ್ಲಸ್ ಟ್ರಸ್ಟ್‌ನ ಡಾ. ಟಿ.ಕೆ. ಪ್ರಭಾಕರ ಶೆಟ್ಟಿ ಮತ್ತು ಡಾ. ಸತ್ಯನಾರಾಯಣ್

ರವರು ಡಿ.ಸಿ. ಕಛೇರಿ ಚಿತ್ರದುರ್ಗದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮಗ್ರ ಕೃಷಿ ಪದ್ಧತಿಯ ಅನುಷ್ಠಾನದ ಬಗ್ಗೆ ಸಭೆ ನಡೆಸಿದರು.



**ಚಿತ್ರ : 26**

**ಪ್ಲಸ್ ಟ್ರಸ್ಟ್‌ನ ಡಾ. ಟಿ.ಕೆ. ಪ್ರಭಾಕರ ಶೆಟ್ಟಿ ಮತ್ತು ಡಾ. ಸತ್ಯನಾರಾಯ್ ರವರು ಡಿ.ಸಿ. ಕಛೇರಿ ಚಿತ್ರದುರ್ಗದಲ್ಲಿ**

## 13.3 ಡಾ. ಪ್ರಕಾಶ್ ಕಮ್ಮರಡಿ ಅಧ್ಯಕ್ಷರು ಕರ್ನಾಟಕ ಕೃಷಿ ಬೆಲೆ ಆಯೋಗ ದಿನಾಂಕ: 26–09–2017 ರಂದು ಕೃಷಿ ವಿಜ್ಞಾನ ಕೇಂದ್ರ, ಚಿತ್ರದುರ್ಗಕ್ಕೆ ಭೇಟಿ ನೀಡಿದರು.

ಡಾ. ಪ್ರಕಾಶ್ ಕಮ್ಮರಡಿ, ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ ಕೃಷಿ ವಿಜ್ಞಾನ ಕೇಂದ್ರ, ಚಿತ್ರದುರ್ಗಕ್ಕೆ ಭೇಟಿ ನೀಡಿ ಯೋಜನೆಯ ಪ್ರಗತಿಯನ್ನು ಗಮನಿಸಿ ಭವಿಷ್ಯದಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಸಲಹೆಗಳನ್ನು ನೀಡಿದರು.



## 13.4 ಅಕ್ಟೋಬರ್ 25, 207 ರಂದು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಕ್ಷೇತ್ರೋತ್ಸವಕ್ಕೆ ಭೇಟಿ.

ಶಿಡ್ಲಯ್ಯನ ಕೋಟೆ ರೈತರನ್ನು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗಕ್ಕೆ ಕ್ಷೇತ್ರೋತ್ಸವಕ್ಕೆ ಕರೆದೊಯ್ಯಲಾಗಿತ್ತು. ರೈತರು ಕ್ಷೇತ್ರೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜ್ಞಾನವನ್ನು ಪಡೆದರು, ರೈತರು ವಿವಿಧ ರೀತಿಯ ಬೆಳೆಗಳು, ಹೊಸ ತಂತ್ರಜ್ಞಾನ, ಜಾನುವಾರಗಳ ಕುರಿತು ವಿಜ್ಞಾನಿಗಳ ವಿಚಾರ ವಿನಿಮಯ ಮಾಡಿಕೊಂಡರು. ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಬೆಳೆಗಳ ನೂತನ ತಾಂತ್ರಿಕತೆಗಳ ಬಗ್ಗೆ ಮಾಹಿತಿ ಪಡೆದರು.



## 13.5 ನವೆಂಬರ್ 3,. 2017 ರಂದು ಜಿಲ್ಲಾಧಿಕಾರಿ ಕಛೇರಿ ಉಡುಪಿ (ಮಣಿಪಾಲ್) ಸಭೆಯಲ್ಲಿ ಭಾಗವಹಿಸಿಕೆ.

ಉಡುಪಿ ಡಿಸಿ ಕಛೇರಿಯಲ್ಲಿ ಸಭೆ ನಡೆಸಲಾಯಿತು. ಕೆ.ಎಂ.ಸಿ. ಮಣಿಪಾಲ್‌ನಲ್ಲಿ ನಡೆಯಲಿರುವ ವ್ಯಕ್ತಿತ್ವ ವಿಕಾಸನ ಕಾರ್ಯಕ್ರಮದ ಸಿದ್ಧತೆಗಾಗಿ ಚರ್ಚೆ ನಡೆಸಲಾಯಿತು. ಎಲ್ಲಾ ಇಲಾಖೆಗಳ ಅಧಿಕಾರಿಗಳಿಂದ ಮತ್ತು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರು ಉಪಸ್ಥಿತರಿದ್ದರು.



## 13.6 ಕಸ್ತೂರಿ ಬಾ ವೈದ್ಯಕೀಯ ಕಾಲೇಜ್, ಮಣಿಪಾಲ್‌ನಲ್ಲಿ ವ್ಯಕ್ತಿತ್ವ ವಿಕಸನ ಅಭಿವೃದ್ಧಿ ಕಾರ್ಯಕ್ರಮ:

ಆಯ್ಕೆಯಾದ ಎಲ್ಲಾ 25 ರೈತರನ್ನು ವ್ಯಕ್ತಿತ್ವ ವಿಕಸನ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ದಿನಾಂಕ: 29–01–2018 ಮತ್ತು 30–01–2018ರಂದು ಕಸ್ತೂರಿಬಾ ವೈದ್ಯಕೀಯ ಕಾಲೇಜಿಗೆ ಕರೆದೊಯ್ಯಲಾಯಿತು, ರೈತರು ಮನಃಶಕ್ತಿ, ಇಚ್ಛಾಶಕ್ತಿ ತಾಳ್ಮೆಯನ್ನು ಹೇಗೆ ವೃದ್ಧಿಸಿಕೊಳ್ಳಬೇಕು ಹಾಗೂ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಜ್ಞಾನವನ್ನು ಪಡೆದರು. ರೈತರಿಗೆ ಯೋಗಾಸನ, ಧ್ಯಾನ ಮುಂತಾದ ಚಟುವಟಿಕೆಗಳನ್ನು ಹೇಳಿ ಕೊಡಲಾಯಿತು.

ರೈತರ ಕಣ್ಣಿನ ಆರೋಗ್ಯ ತಪಾಸಣೆ ಹಾಗೂ ಹಲ್ಲಿನ ಆರೋಗ್ಯ ತಪಾಸಣೆ ಮಾಡಲಾಯಿತು.

ಮರುದಿನ ರೈತರ ದರೆಗುಡ್ಡ ಗ್ರಾಮದ ಪ್ರಗತಿಪರ ರೈತ ಕ್ಷೇತ್ರಕ್ಕೆ ಭೇಟಿ ನೀಡಿದರು.



ಚಿತ್ರ 27

**ಕಸ್ತೂರಿ ಬಾ ವೈದ್ಯಕೀಯ ಕಾಲೇಜ್ ಮಣಿಪಾಲ್‌ನಲ್ಲಿ ವ್ಯಕ್ತಿತ್ವ ವಿಕಸನ ಅಭಿವೃದ್ಧಿ ಕಾರ್ಯಗಾರ**

## 13.7 ಡಾ. ಪ್ರಕಾಶ್ ಕಮ್ಮರಡಿ ಅಧ್ಯಕ್ಷ ಕರ್ನಾಟಕ ಕೃಷಿ ಬೆಲೆ ಆಯೋಗ, ದಿನಾಂಕ: 13–02–2018 ರಂದು ಶಿಡ್ಲಯ್ಯನ ಕೋಟೆ ಗ್ರಾಮಕ್ಕೆ ಭೇಟಿ:

ಡಾ. ಪ್ರಕಾಶ್ ಕಮ್ಮರಡಿ ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ, ಶಿಡ್ಲಯ್ಯನ ಕೋಟೆ ಗ್ರಾಮಕ್ಕೆ ಭೇಟಿ ನೀಡಿ ರೈತರೊಂದಿಗೆ ಸಭೆ ನಡೆಸಿ ಸಿರಿಧಾನ್ಯ ಉತ್ಪಾಧಕರ ಸಂಘಟನೆಯನ್ನು ರಚಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು, ಈ ಕಾರ್ಯಕ್ರಮದಲ್ಲಿ ಡಾ. ಓಂಕಾರಪ್ಪ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಕೆ.ವಿ.ಕೆ. ಚಿತ್ರದುರ್ಗ, ಶ್ರೀ ಮಸ್ತಕ್ ಕೃಷಿ ಅಧಿಕಾರಿ, ಧರ್ಮಪುರ, ಶ್ರೀನಿವಾಸ್ ಕಾರ್ಯದರ್ಶಿ ಎ.ಪಿ.ಎಂ.ಸಿ. ಹಿರಿಯೂರು ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.



ಚಿತ್ರ : 28

**ಡಾ. ಪ್ರಕಾಶ್ ಕಮ್ಮರಡಿ ಅಧ್ಯಕ್ಷ ಕರ್ನಾಟಕ ಕೃಷಿ ಬೆಲೆ ಆಯೋಗ ರವರಿಂದ ಸಿರಿಧಾನ್ಯ ಉತ್ಪಾದಕರ ಸಂಘಟನೆಯನ್ನು ರಚಿಸುವ ಕುರಿತು ಸಭೆ**

## 13.8 ದಿನಾಂಕ: 21–02–2018 ರಂದು ಐಐಪಿಎಂ ಬೆಂಗಳೂರಿನಲಿ ಸಾಮರ್ಥ್ಯವೃದ್ಧಿ ಕಾರ್ಯಕ್ರಮ

ಐಐಎಂಪಿ ಬೆಂಗಳೂರಿನಲ್ಲಿ ತೋಟಗಾರಿಕೆ ವ್ಯವಹಾರಗಳ ನಿರ್ವಹಣೆಗಾಗಿ ರೈತ ಉತ್ಪಾದಕರ ಸಂಘದ ಸುಸ್ಥಿರ ನಿರ್ವಹಣೆ ಕುರಿತು ಸಾಮರ್ಥ್ಯ ವೃದ್ಧಿಸುವ ಕಾರ್ಯಕ್ರಮಕ್ಕೆ ಪಾಲ್ಗೊಂಡರು. ರೈತರು ರೈತ ಉತ್ಪಾದಕರ ಸಂಘವನ್ನು ಹೇಗೆ ರಚಿಸುವುದು, ಹಣಕಾಸಿನ ವಿಷಯಗಳನ್ನು ಹೇಗೆ ನಿರ್ವಹಿಸುವುದು, ಗುಂಪುಗಳನ್ನು ಹೇಗೆ ನಿರ್ವಹಿಸುವುದು, ತಮ್ಮ ಉತ್ಪನ್ನಗಳಿಗೆ ಪ್ರಚಾರವನ್ನು ಹೇಗೆ ಪಡೆಯುವುದು ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ಸಾಕಷ್ಟು ಜ್ಞಾನವನ್ನು ಈ ತರಬೇತಿ ಕಾರ್ಯಕ್ರಮದಲ್ಲಿ ತಿಳಿದುಕೊಂಡರು.



## 13.9 ದಿನಾಂಕ: 02–03–2018 ರಿಂದ 03–03–2018 ರವರೆಗೆ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಗುಲ್ಬರ್ಗದಲ್ಲಿ ರಾಜ್ಯ ಮಟ್ಟದ ಕಾರ್ಯಾಗಾರ

ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಗುಲ್ಬರ್ಗದಲ್ಲಿ ನಡೆದ ಕಾರ್ಯಾಗಾರದಲ್ಲಿ ಶಿಡ್ಲಯ್ಯನಕೋಟೆಯ ಹತ್ತು ಜನ ರೈತರು ಭಾಗವಹಿಸಿದ್ದರು. ಗ್ರಾಮಿಣಾಭಿವೃದ್ಧಿ ಮತ್ತು ಗ್ರಾಮದಲ್ಲಿನ ನೈರ್ಮಲ್ಯ ಸಮಸ್ಯೆಗಳ ಕುರಿತು ಜಾಗೃತಿ ಸೆಮಿನಾರ್‌ಗಳನ್ನು ಪ್ರಸ್ತುತಪಡಿಸಲಾಯಿತು. ಹಾಗೂ ತೆಲ್ಲೂರು ಗ್ರಾಮಕ್ಕೆ ಭೇಟಿ ನೀಡಲಾಯಿತು.



ಚಿತ್ರ : 29

**ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಗುಲ್ಬರ್ಗದಲ್ಲಿ ರಾಜ್ಯ ಮಟ್ಟದ ಕಾರ್ಯಾಗಾರ**

## 13.10 ದಿನಾಂಕ: 06–03–2018 ರಂದು ಸಿರಿಧಾನ್ಯ ಕೃಷಿಯಿಂದ ಸುಸ್ಥಿರ ಆದಾಯದ ಕಾರ್ಯಾಗಾರ, ಬೆಂಗಳೂರು.

ಸಿರಿಧಾನ್ಯ ಕೃಷಿಯಿಂದ ಸುಸ್ಥಿರ ಆದಾಯದ ಕಾರ್ಯಾಗಾರದಲ್ಲ ಶಿಡ್ಲಯ್ಯನಕೋಟೆ ಗ್ರಾಮದಿಂದ ಆಯ್ದ 10 ರೈತರು ಭಾಗವಹಿಸಿದ್ದರು. ರೈತರು ಮತ್ತು ವಿಜ್ಞಾನಿಗಳ ನಡುವೆ ಸಂವಾದ ಮತ್ತು ಚರ್ಚೆ ಮಾಡಲಾಯಿತು.

ಸಿರಿಧಾನ್ಯ ಕೃಷಿ ಪದ್ಧತಿಯಿಂದ ಸುಸ್ಥಿರ ಆದಾಯವನ್ನು ಹೇಗೆ ಗಳಿಸುವುದು ಹಾಗು ಮೌಲ್ಯವರ್ಧನೆಯಿಂದ ಮಾರುಕಟ್ಟೆಯಲ್ಲಿ ಹೇಗೆ ಹೆಚ್ಚು ಆದಾಯಗಳಿಸಬಹುದೆಂದು ಚರ್ಚಿಸಿದರು.



ಚಿತ್ರ : 30

**ಸಿರಿಧಾನ್ಯ ಕೃಷಿಯಿಂದ ಸುಸ್ಥಿರ ಆದಾಯದ ಕಾರ್ಯಾಗಾರ,**
**ಫೈರ್ ಫ್ಲೈಸ್ ಆಶ್ರಮ, ಬೆಂಗಳೂರು**

## 13.11 ಯುವ ರೈತರಿಗೆ ದೂರ ಡಿಪ್ಲೊಮಾ ಕೋರ್ಸ್‌ನ ಮಾಹಿತಿ

ಯುವ ಕೃಷಿಕರಿಗಾಗಿ ದೂರ ಡಿಪ್ಲೋಮಾ ಕೋರ್ಸ್‌ಗೆ ಮಾಹಿತಿ ನೀಡಲಾಯಿತು. ಅವರಲ್ಲಿ 10 ಆಸಕ್ತ ರೈತರನ್ನು ಆಯ್ಕೆ ಮಾಡಲಾಯಿತು ಮತ್ತು ಸಮಗ್ರ ಕೃಷಿ ಪದ್ಧತಿಯಲ್ಲ ಡಿಪ್ಲೋಮಾಕ್ಕೆ ಸೇರಿಸಲಾಯಿತು. 2019 ಮೇ ತಿಂಗಳಲ್ಲಿ ಡಿಪ್ಲೋಮ ತರಗತಿಗಳು ನಡೆದವು ಹಾಗೂ ಪರೀಕ್ಷೆಯನ್ನು ರೈತರು ಮುಗಿಸಿದ್ದಾರೆ.



## 13.12 ದಿನಾಂಕ: 08–06–2018 ಮತ್ತು 09–06–2018 ರಂದು ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ ಚಿತ್ರದುರ್ಗದಲ್ಲಿ ಪ್ರತಿ ಪರಿಶೀಲನಾ ಸಭೆ:

ಕೆಎಪಿಸಿ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ, ಎಲ್ಲಾ 8 ಕೆ.ವಿ.ಕೆ. ಮುಖ್ಯಸ್ಥರು, ಸಂಶೋಧನಾ ಸಹಾಯಕರು, ಕ್ಷೇತ್ರ ಸಹಾಯಕರು, 8 ಗ್ರಾಮದ ರೈತರು ಭಾಗವಹಿಸಿದ್ದರು. ತಾಲ್ಲೂಕು ಮಟ್ಟದ ಎಲ್ಲಾ ವಿವಿಧ ಇಲಾಖೆಗಳ ಮುಖ್ಯಸ್ಥರು ಉಪಸ್ಥಿತಿರಿದ್ದರು. ರೈತರು, ಕಾರ್ಯಕ್ರಮ ಸಂಯೋಜಕರು ಮತ್ತು ಸಂಶೋಧನ ಸಹಾಯಕರು, ಕ್ಷೇತ್ರ ಸಹಾಯಕರುಗಳ ವಿವಿಧ ಗುಂಪುಗಳಲ್ಲಿ ಚರ್ಚೆಗಳು ನಡೆದವು. ವಿವಿಧ ಇಲಾಖೆಗಳ ಯೋಜನೆಗಳ ಬಗ್ಗೆ ಇಲಾಖೆಗಳ ಮುಖ್ಯಸ್ಥರು ಮಾಹಿತಿ ನೀಡಿದರು.

ಕೆ.ಎ.ಪಿ.ಸಿ. ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಹಾಗು ಎಲ್ಲಾ 8 ಕೆ.ವಿ.ಕೆ. ಮುಖ್ಯಶ್ತರು ಸಂಶೋಧನಾ ಸಹಾಯಕರು, ಕ್ಷೇತ್ರ ಸಹಯಕರು, 8 ಗ್ರಾಮಗಳ ರೈತರು ಶಿಡ್ಲಯ್ಯನಕೋಟೆ ಗ್ರಾಮಕ್ಕೆ ಭೇಟಿ ನೀಡಿದರು. ಹಾಗೂ ಶಿಡ್ಲಯ್ಯನಕೋಟೆ ಗ್ರಾಮದಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.




**ಚಿತ್ರ : 31**

**ಡಾ. ಪ್ರಕಾಶ್ ಕಮ್ಮರಡಿ ರವರ ನೆತೃತ್ವದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹಿರಿಯೂರಿನಲ್ಲಿ ಆಯೋಜಿಸಿದ ಪ್ರಗತಿ ಪರಿಶೀಲನಾ ಸಭೆ**

## 14. ಶಿಡ್ಲಯ್ಯನಕೋಟೆ ಸಾವಯವ ಸಿರಿಧಾನ್ಯಗಳ ಉತ್ಪಾದಕರ ಸಂಘ:

ಸಿರಿಧಾನ್ಯಗಳ ಉತ್ಪಾದಕರ ಸಂಘ ನೊಂದಾಯಿಸಲಾಗಿದೆ. ಈ ಸಂಘದ ಅಡಿಯಲ್ಲಿ 200 ಸಿರಿಧಾನ್ಯಗಳ ಬೆಳೆಗಾರರನ್ನು ಪಿಪಿಪಿ–ಐಎಡಿ ಯೋಜನೆಗಾಗಿ ಒದಗಿಸುತ್ತಿದ್ದೇವೆ, ಅದರ ಮೂಲಕ ಅವರು ಸಿರಿಧಾನ್ಯಗಳನ್ನು ಬೆಳೆಯಬಹುದು ಮತ್ತು ಅದನ್ನು ಇಲಾಖೆಯಿಂದ ಖರೀದಿಸಲಾಗುವುದು (ಮರು ಖರೀದಿ ವ್ಯವಸ್ಥ) ಹಾಗೂ ಸಿರಿಧಾನ್ಯಗಳ ಮೌಲ್ಯವರ್ಧನೆ ಯಂತ್ರವನ್ನು ಸಂಘಕ್ಕೆ ಕೃ.ಬೆ.ಅ. ವತಿಯಿಂದ ಮಂಜೂರು ಮಾಡಲಾಗಿದೆ.


ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ನೋಂದಣಿ ಪ್ರಮಾಣ ಪತ್ರ

ದಿನಾಂಕ: 11/09/2018

:DRCT/SOR/212/2018-2019.

... 1960 (1960 ... 17 ...

SHIDLAIYYANAKOTE SAVAYAVA SIRIDHANYA UTPADAKARA SANGHA
#B207 SHIDLAIYYANAKOTE DHARMAPURA HOBLI HIRIYUR - 577545,
CHITRADURGA

... 500.00/-

11/09/2018 ...

Class of Society :GENERAL



ಚಿತ್ರ : 32

**ಶಿಡ್ಲಯ್ಯನಕೊಟೆ ಸಾವಯವ ಸಿರಿಧನ್ಯಗಳ ಉತ್ಪಾದಕರ ಸಂಘ ನೊಂದಣಿ ಪತ್ರ ಹಸ್ತಾಂತಿರಸಲಾಗುತ್ತಿರುವುದು**

## ಸಿರಿಧಾನ್ಯಗಳ ಸಂಸ್ಕರಣಾ ಮತ್ತು ಮೌಲ್ಯವರ್ಧನೆ ಘಟಕ ಸ್ಥಾಪನೆ:

ಹಿರಿಯೂರು ತಾಲ್ಲೂಕಿನ ಶಿಡ್ಲಯ್ಯನಕೋಟೆ ಗ್ರಾಮಕ್ಕೆ 2.8 ಲಕ್ಷ ಅನುದಾನ (ಕೃ.ಬೆ.ಆ) ಮಂಜೂರಾಗಿದೆ. ಸಿರಿಧಾನ್ಯಗಳ ಸಂಸ್ಕರಣಾ ಮತ್ತು ಮೌಲ್ಯವಧನೆ ಘಟಕವನ್ನು ಗ್ರಾಮದಲ್ಲಿ ಸ್ಥಾಪಿಸಲಾಗುವುದ.



**ಸಿರಿಧಾನ್ಯಗಳ ಸಂಸ್ಕರಣಾ ಯಂತ್ರ**

## 2019ರ ಮುಂಚಣಿ ಪ್ರಾತ್ಯಾಕ್ಷಿಕೆ:

ಈ ವರ್ಷದ ಮುಂಚಣಿ ಪ್ರಾತ್ಯಕ್ಷಿಕೆ ಅಡಿಯಲ್ಲಿ 50 ಜನ ರೈತರಿಗೆ ಶೇಂಗಾ ಹಾಗೂ 50 ಜನ ರೈತರಿಗೆ ತೊಗರಿಬೀಜಗಳನ್ನು (ರೂ. 1,50,000) ವಿತರಿಸಲಾಗಿದೆ.

ಶಿಡ್ಲಯ್ಯನಕೋಟೆ ಗ್ರಾಮದ ಶಾಲೆಯಲ್ಲಿ ದಿನಾಂಕ: 05 ಜುಲೈ 2109 ರಂದು ಶಿಡ್ಲಯ್ಯನಕೋಟೆ ಸಾವಯವ ಸಿರಿ ಧಾನ್ಯಗಳ ಉತ್ಪಾದಕರ ಸಂಘದ ಸಂಯೋಗದೊಂದಿಗೆ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು, ಶಾಲೆಯ ಆವರಣದಲ್ಲಿ ಸಸಿಗಳನ್ನು ನೆಡಲಾಯಿತು, ಹಾಗೂ ರೈತರಿಗೆ ಸಸಿಗಳನ್ನು ಹಂಚಲಾಯಿತು.